ಹೊಲಮಾಳಕ್ಕೆ ಹೋದಮೇಲೆ ಇಡೀ ಊರು 'ಸ್ಮಶಾನ ಕುರುಕ್ಷೇತ್ರ'ದಂತೆ ಮೌನವಾಗಿರುತ್ತಿತ್ತು! ಊರಿನ ನಾಲ್ಕಾರು ಗಂಡಾಳುಗಳು, ಜನ ಹೊರಬೀಡು ಮುಗಿಸಿಕೊಂಡು ತಮ್ಮ ತಮ್ಮ ಮನೆಗಳಿಗೆ ಮರುಳುವವರೆಗೂ ಊರಿಗೆ ಪಾರಾ(ಕಾವಲು) ಇರುತ್ತಿದ್ದರು.

ಸಾಮಾನ್ಯವಾಗಿ ಎಲ್ಲರೂ ಊರ ಹೊರಗಿರುವ ಒಂದೇ ಹೊಲಮಾಳಕ್ಕೆ ಹೋಗುವುದು ವಾಡಿಕೆ. ದನ–ಕರುಗಳನ್ನೆಲ್ಲಾ ಗೊಂತಿಗೆ ಬಿಗಿದು, ಹೊಲಮಾಳದಲ್ಲಿದ್ದ ಹುಣಸೆ, ಹೊಂಗೆ, ಅಥವಾ ಇಪ್ಪೆ ಮರಗಳಡಿಯಲ್ಲಿ ಎಲ್ಲರೂ ಒಲೆ ಹೂಡುತ್ತಿದ್ದರು. ಬೋವಿ ಲಕ್ಕಮ್ಮನ ಒಲೆಯ ಪಕ್ಕದಲ್ಲಿ ತಳವಾರ ಜಿಂಕಲಪ್ಪನವರ ಮನೆಯವರು ಒಲೆ ಹೂಡಿದರೆ, ಹಳ್ಳಿಕಾರ ಸಂಜೀವಮ್ಮನವರ ಪಕ್ಕದಲ್ಲಿ ಗಾಣಿಗರ ಬೋಜಮ್ಮನವರು, ತಿಗಳರ ಚಿನ್ನಮ್ಮನವರು ಒಲೆ ಹೂಡುತ್ತಿದ್ದರು. ಯಾರಿಗೂ ಯಾವುದಕ್ಕೂ ಅಡ್ಡಿ ಮಾಡುವಂತಿರಲಿಲ್ಲ! ಹೀಗೆ ಯಾರು ಯಾರ ಪಕ್ಕದಲ್ಲಾದರೂ ಒಲೆ ಹೂಡಬಹುದಾಗಿತ್ತು. ಕೆಂಪವ್ವ, ಬೋಜಮ್ಮನ ಬಳಿಗೆ ಬಂದು, 'ಯಕ್ಕಾ ಒಂದು ಚಟಾಕು ಕೊತ್ತಮ್ರಿರಿ ಬೀಜ ಕೊಡೆ, ಸಾಲ್ದ ಬಂದೈತೆ, ನನ್ನ ಅಳಿಮಯ್ಯ ಬಂದವನೆ' ಎಂದೋ; ಚೆನ್ನಬಸಮ್ಮ, ನರಸಮ್ಮನ ಹತ್ತಿರ ಬಂದು, 'ಯವ್ವಾ ಒಂದು ಚಟಾಕು ಕಾರ್ದುಹುಡಿ ಕೊಡವ್ವ' ಎಂದು ಕೇಳುತ್ತಾ ಮಾತಿಗೆ ಜೋತುಬಿದ್ದು ನಿಲ್ಲುತ್ತಿದ್ದ ದೃಶ್ಯ, ತಿಗಳರ ಚಿನ್ನಮ್ಮ ಬೋಜಮ್ಮನ ಹತ್ತಿರ ಬಂದು, 'ಚಿಕ್ಕೀ, ಒಂದ್ಹಿಡಿ ಚಕ್ಕರೆ (ಉಪ್ಪು) ಕೊಡವ್ವ, ಮೂದೇವಿ ನನ್ನ ಸೊಸೆ ಮರೆತು ಬಂದವಳೆ' ಎಂದು ಕೇಳಿ ತಗೆದುಕೊಳ್ಳುತ್ತಿದ್ದ ದೃಶ್ಯಗಳಂತೂ ನೋಡಲು ಆನಂದ ತರುತ್ತಿದ್ದವು. ಈ ಮೂಲಕ ಎಲ್ಲರ ಮನಸ್ಸಿನೊಳಗೆ ಇರುತ್ತಿದ್ದ ಸಣ್ಣಪುಟ್ಟ ಕಹಿ ಭಾವನೆಗಳೂ ಕರಗಿ ಹೋಗುತ್ತಿದ್ದವು. ಎಲ್ಲ ಕೇಡಿನ ಮೂಲವಾಗಿದ್ದ ಭೋಗಾಸಕ್ತಿ, ಅಸೂಯೆ, ಈರ್ಷೆ ಮತ್ತು ಪ್ರತ್ಯೇಕತೆಯ ಮನೋಭಾವವನ್ನು ಅವರು ಎಂದೂ ತಮ್ಮ ಬದುಕಿನೊಳಗೆ ಬಿಟ್ಟುಕೊಂಡಿರಲಿಲ್ಲ. ಜಾತಿ–ಕುಲದ ಕಟ್ಟಲೆಗಳನ್ನು ಊರಿನ ಜನ ಹೀಗೆ ಅಪ್ರಜ್ಞಾಪೂರ್ವಕವಾಗಿ ಮುರಿಯುತ್ತಿದ್ದರು. ಹೀಗೆ 'ಹೊರಬೀಡು' ಜಾತಿಯ ಕಟ್ಟುಪಾಡುಗಳನ್ನು ಉಲ್ಲಂಘಿಸಲು ಎಲ್ಲರಿಗೂ ಮುಕ್ತ ಸ್ವಾತಂತ್ರ್ಯ ನೀಡಿತ್ತು.

ನಮ್ಮ ಊರಿನಲ್ಲಿದ್ದವರೆಲ್ಲಾ ಬಹುಪಾಲು ಮಾಂಸಾಹಾರಿಗಳೇ ಆಗಿದ್ದರಿಂದ, ಮಾಂಸಾಹಾರವೇ ಅಂದು ನಮ್ಮ ಮುಖ್ಯ ಊಟವಾಗಿರುತ್ತಿತ್ತು. ಅದೂ ಎಂತಹ ಊಟವೆಂದರೆ, ಅಲ್ಲಿಯೇ ಕೋಳಿ ಕೊಯ್ದು, ಕಾರ ಅರೆದು, ಮಾಡುತ್ತಿದ್ದ ಕೋಳಿಬಾಡಿನ್ಸೆಸರು. ಯಾವ ಕಡೆ ಕಣ್ಣು ಹಾಯಿಸಿದರೂ ಬಾಡಿನ್ಸೆಸರಿನ ಸಂಭ್ರಮ ಎದ್ದುಕಾಣುತ್ತಿತ್ತು. ಎಸರು ಕುದಿ ಬಂದ ಮೇಲೆ, ಕಾಯಿಸಿದ ಚೂರಿಯನ್ನು ಮೂರು ಸಲ ಸುತ್ತಲೂ ನೀವಳಿಸಿ ಅದರೊಳಗೆ ಅದ್ದಿದ ನಂತರ ಸ್ವಾರೆಯನ್ನು ಒಲೆ ಮೇಲಿಂದ ಇಳಿಸುತ್ತಿದ್ದರು. ಅಲ್ಲಿಗೆ ಅಡುಗೆ ಸಿದ್ಧವಾಯಿತು ಎಂದೇ ಅರ್ಥ! ನನ್ನ ಎಳೆಯ ಕಣ್ಣುಗಳಿಗೆ ಇವೆಲ್ಲಾ ಕುತೂಹಲದ ಕ್ರಿಯೆಗಳಾಗಿದ್ದವು! ಅಜ್ಜವ್ವನ ಕೇಳಿದರೆ, 'ಹೊರಗಿನ ಕೆಟ್ಟ ಶಕ್ತಿಗಳ ಕಾಕ ದೃಷ್ಟಿ ಮಾಡಿದ ಅಡುಗೆಗೆ ತಾಗದಿರಲಿ ಎಂದು ಈ ರೀತಿ ಮಾಡುತ್ತೀವಿ' ಎಂದು ಹೇಳುತ್ತಿತ್ತು. ಆವೊತ್ತು ನಾವು ಮಾಡುತ್ತಿದ್ದ ಊಟ ಕೇವಲ ನಮ್ಮಲ್ಲಿಗೇ ಸೀಮಿತವಾಗಿರುತ್ತಿರಲಿಲ್ಲ! ಊಟ ಮುಗಿಸಿ, ಒಂದು ಸುತ್ತು ಹಾಗೆಯೇ ಬಂದರೆ, 'ಚಿಟ್‌ಗೋಳಿಬಾಡಿನ್ಸೆಸರು ಮಾಡಿದ್ದೀನಿ ಉಂಡು ಹೋಗು ಬಾರಪ್ಪ... ಕೈಗೆ ನೀರು ಸೋಕ್ಸಿ, ಸುಲಪಟ್ಟೆ ಎಲೆ ತಗೋ' ಎಂದು ಬೋಜಮ್ಮ, ತಿಮ್ಮವಕ್ಕ, ಚೆನ್ನಮ್ಮ ಹೀಗೆ ಎಲ್ಲರೂ ಕರೆಯೋರೆ! ಹೀಗೆ ಕನಿಷ್ಠ ಮೂರು ನಾಲ್ಕು ಕಡೆಯಾದರೂ ಊಟಕ್ಕೆ ಆಹ್ವಾನ ಬರುತ್ತಿತ್ತು. ನಾವು ಮೇಲುನೋಟಕ್ಕೆ, 'ಇಲ್ಲ ಕಣೆ ಚಿಕ್ಕ, ಈಗತಾನೆ ಉಂಡು ಬಂದೆ. ನೋಡು ಇನ್ನೂ ಉಂಡಿದ್ದ ಕೈ ಆರಿಲ್ಲ!' ಎಂದು ನೆಪಮಾತ್ರಕ್ಕೆ ಕೈ ತೋರಿಸುತ್ತಾ, 'ಎಸಟ್‌ಕೋ ಒಂದು ಗುಳ್ಳೆಕಾಯಿನಷ್ಟು ಹಿಟ್ಟು ಇಡವ್ವಾ...' ಎಂದು ಹೇಳಿ ಅಗಲಿನ ಮುಂದೆ ಕುಳಿತುಕೊಳ್ಳುತ್ತಿದ್ದೆ. ಹೀಗೆ ಬಾಡಿನ್ಸೆಸರಿಗೆ ನಾಲಗೆ ಹೊರಳಿಸಿಕೊಂಡು ಕಾಯುತ್ತಿದ್ದುದು ನನಗೊಬ್ಬನಿಗೇ ಮೀಸಲಾಗಿರಲಿಲ್ಲ! ನನ್ನ ವಾರಿಗೆಯವರೆಲ್ಲರೂ ಇದೇ ಕ್ರಮವನ್ನು